

ಗುಂಡುರಾವ್ ದೇಸಾಯಿ

ಕಲೆ: ಸಂತೋಷ್ ಸಸಿಹಿತ್ಲು

# ಅಬ್‌ನಾರ್ಮಲ್ ಚೆನ್ನ

'ಹೊರಟ, ನೋಡಪ ಗಾಂಧಿ' ಎಂದ ನಾಗ. 'ಯಾರಿಗೆ ಗಾಂಧಿ ಎಂದು ಕರೆಯುತ್ತಿರುವೆ. ಯಾರವನು?' ಎಂದ ಹೊಸದಾಗಿ ಶಾಲೆಗೆ ಸೇರಿದ್ದ ರಾಮು.

'ಅಯ್ಯೋ! ಅವನು ನಮ್ಮ ಕ್ಲಾಸ್‌ನಲ್ಲಿ ಇದ್ದಾನಲ್ಲ ಮಬ್ಬು ಚೆನ್ನ' ಎಂದನು.

'ನನಗೇನು ಅವನು ಹಾಗೆ ಅನಿಸುತ್ತಿಲ್ಲಪ. ನಾರ್ಮಲ್ ಆಗಿದ್ದಾನೆ. ಆದರೆ ದಿನಾ ಶಾಲೆಗೆ ತಡವಾಗಿ ಬಂದು ಶಿಕ್ಷಕರಿಂದ ಬೈಸಿಕೊಳ್ಳುತ್ತಾನೆ. ಅವನಿಗೆ ಏನು ತೊಂದರೆ ಇದೆಯೋ ಏನೋ? ಮೇಷ್ಟ್ರು ಸುಮ್ಮ ಸುಮ್ಮನೆ ಬೈತಿರತಾರೆ. ಪಾಪ! ಅಯ್ಯೋ ಅನಸ್ತದ' ಎಂದ ರಾಮು.

'ಬಯ್ಯದೆ ಏನು ಮಾಡತಾರೆ. ಎಲ್ಲರಂತೆ ಇಲ್ಲಲ್ಲ. ಅವ ಅಬ್‌ನಾರ್ಮಲ್... ಬುದ್ಧಿಮಾಂದ್ಯ ಇದ್ದಂಗ ಅವ. ಬೇಕಾದ್ರೆ ಫಾಲೋ ಮಾಡೋಣ ತೋರಸ್ತೀನಿ. ನೀನೇ ನೋಡುವಂತಿ, ಅವನು ಹುಚ್ಚನೋ ಜಾಣನೋ' ಎಂದ ನಾಗ. ರಾಮುವಿಗೂ ಕುತೂಹಲ ಉಕ್ಕಿ 'ನಡೆ ಹೋಗೋಣ' ಎಂದ.

ಚೆನ್ನ ಮುಂದೆ ಮುಂದೆ. ರಾಮು, ನಾಗ ಹಿಂದೆ ಹಿಂದೆ ಹೊರಟರು.

ರಸ್ತೆಯಲ್ಲಿ ಬೀದಿದೀಪ ಉರಿಯುತಿತ್ತು.

'ನೋಡು ರಾಮು ಈಗ ಚೆನ್ನ ಹೋಗಿ ಆಫ್ ಮಾಡುತ್ತಾನೆ' ಎಂದ.

ನಾಗ ಹೇಳಿದಂತೆ ಚೆನ್ನ ಸ್ವಿಚ್ ಆಫ್ ಮಾಡಿದ.

'ಈಗ ನೋಡು ಅಲ್ಲಿ ಪಬ್ಲಿಕ್ ನಳ ಲೀಕ್ ಆಗುತ್ತಿದೆಯಲ್ಲ, ಅದು ಸರಿ ಮಾಡುತ್ತಾನೆ' ಎಂದ ನಾಗ.

ಅವನು ಹೇಳಿದಂತೆ ಚೆನ್ನ ವ್ಯರ್ಥವಾಗಿ ಹರಿಯುತ್ತಿದ್ದ ನೀರನ್ನು ನಿಲ್ಲಿಸಿದ.

'ಈಗ ನೋಡು ಅಲ್ಲಿ ಭಿಕ್ಷೆ ಬೇಡುತ್ತಾ ಬರುತ್ತಿದ್ದನಲ್ಲ, ಆ ಅಜ್ಜನಿಗೆ ದುಡ್ಡು ಕೊಡುತ್ತಾನೆ' ಎಂದಾಗ ಅವನು ಹಾಗೇ ಮಾಡಿದ, ತನ್ನ ಹತ್ತಿರ ಇದ್ದ ದುಡ್ಡನ್ನು ಕೊಟ್ಟ.

'ಹಾದಿಯಲ್ಲಿ ಕಸದ ಚೀಲ ಚೆಲ್ಲಿದ್ದಾರೆ, ಅದನ್ನು ಆ ಪುಟ್ಟಿಯೊಳಕ್ಕೆ ಹಾಕುತ್ತಾನೆ ನೋಡು' ಎಂದ ನಾಗ, ಚೆನ್ನ ಅವನು ಹೇಳಿದಂತೆ ಮಾಡಿದ.

'ಈಗ ಮಂದೆ ನೋಡು' ಎಂದ ನಾಗ.

ಚೆನ್ನ ರಸ್ತೆ ದಾಟಲು ಕಷ್ಟಪಡುತ್ತಿದ್ದ ಅಜ್ಜಿಯನ್ನು ರಸ್ತೆ ದಾಟಿಸಿದ, ನಂತರ ರಸ್ತೆಯಲ್ಲಿ ಬಿದ್ದ ಮುಳ್ಳನ್ನು ತೆಗೆದ.

ನಾಗ 'ಅವನ ಬ್ಯಾಗ ನೋಡು, ಬಟ್ಟೇದು. ಅಂಗಡಿಗೆ ಹೋಗಬೇಕಾದರೂ ಬಟ್ಟೆ ಬ್ಯಾಗನ್ನು ಒಯ್ಯುತ್ತಾನೆ. ಎರಡು ವರ್ಷದಿಂದ ಅದೇ ಪೆನ್ನು ಇದೆ, ಕಡ್ಡಿ ಮಾತ್ರ ಚೇಂಜ್ ಮಾಡ್ತಾನೆ. ಹಳ್ಳಿ ಗುಗ್ಗುನಂಗೆ ಬೆಳಗ್ಗೆ ಬೇವಿನ ಕಡ್ಡಿಯಿಂದ ಉಜ್ಜುತ್ತಾನೆ. ಸೋಪ್‌ನ ಬದಲು ಏನೇನೊ ಬಳಸುತ್ತಾನೆ. ಅವನು ಮಾಡೋ ಕೆಲಸ ಹೇಳುತ್ತಾ ಕುಳಿತರೆ ಶಾಲೆ ಗಂಟೆ ಹೊಡೆಯುತ್ತೆ. ಬಾ ನಡಿ' ಎಂದು ಒಂದು ಬಿಡದೆ ಏನೆಲ್ಲಾ ಕಥೆ ಚೆನ್ನನ ಬಗ್ಗೆ ಹೇಳಿದ, ತಾನು ಜಾಣ ಎಂದು ತೋರಿಸಲು.

ರಾಮು 'ಅವನು ಮಾಡುತ್ತಿರುವುದೆಲ್ಲ ಒಳ್ಳೆಯ